(ಇಂದು ದಿನಾಂಕಃ 20-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಎಮ. ಎಸ. ಎಸ ವಕೀಲರಿಂದ ಪ್ರತಿವಾದಿಯ ಪರಃ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

2. ಸರ್ವೆ ನಂ.44 ರ ಜಮೀನಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ರಿಂದ ನಿ.ಡಿ-5 ಎಂದು ಗುರುತಿಸಲಾಯಿತು. ದಿ 05-12-2019 ರ ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಎಸ್.ಜಿ.ಜೆ ವಾದಿ ಪರ ವಕೀಲರಿಂದ .ಃ**

1. ದಾವಾ ಆಸ್ತಿ ನಮ್ಮ ಹಿರಿಯರಿಂದ ಬಂದ ಆಸ್ತಿ ಅಲ್ಲ ಎಂದರೆ ಸಾಕ್ಷಿ ನಮ್ಮ ಮುತ್ಯರವರು ಖರೀದಿ ಮಾಡಿರುವ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ.1968-69 ರಲ್ಲಿ ಈ ಆಸ್ತಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಹೈಬತಿ ಎಂಬುವವರ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ಸಿದ್ದಪ್ಪ ಹೈಬತಿ, ಶಿವಪ್ಪ ಹೈಬತಿ ಇಬ್ಬರು ಅಣ್ಣ-ತಮ್ಮಂದಿರು ಎಂದರೆ ಸರಿ. ಮೊದಲಿನಿಂದಲು ದಾವಾ ಆಸ್ತಿ ಮಾಲಿಕರು ಸಿದ್ದಪ್ಪ ಹೈಬತಿ ಮತ್ತು ಶಿವಪ್ಪ ಹೈಬತಿ ಇರುತ್ತಾರೆ ಎಂದರೆ ಸಾಕ್ಷಿ ಸಿದ್ದಪ್ಪ ಹೈಬತಿ ಒಬ್ಬರೆ ದಾವಾ ಆಸ್ತಿ ಮಾಲಿಕರು ಇರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಒಟ್ಟು 7 ಎಕರೆ 18 ಗುಂಟೆ ಆಗಿದ್ದು ಅದು ಸರ್ವೆ ನಂಬರ 44 ರಲ್ಲಿ ಇರುತ್ತದೆ. ಸರ್ವೆ ನಂಬರ 44 ರಲ್ಲಿ 7 ಎಕರೆ 18 ಗುಂಟೆ 1968-69 ರಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ನೋಡಿಲ್ಲ. ನಾನು ಪ್ರತಿವಾದ ಪತ್ರ ಸಲ್ಲಿಸುವ ಮೊದಲು ಪಹಣಿ ನೋಡಿದ್ದು ಅದು ಸಿದ್ದಪ್ಪನ ಹೆಸರಿನಲ್ಲಿ ಇರುತ್ತದೆ. ಸಿದ್ದಪ್ಪ ತಂದೆ ಹೈಬತಿರವರ ಹೆಸರಿನಲ್ಲಿ 7 ಎಕರೆ 18

ಗುಂಟೆ ಮತ್ತು ಶಿವಪ್ಪ ಹೈಬತಿಯವರ ಹೆಸರಿನಲ್ಲಿ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ತಂದೆ ಹೈಬತಿ ಮತ್ತು ಶಿವಪ್ಪ ಹೈಬತಿಯವರ ಜಂಟಿ ಹೆಸರಿನಲ್ಲಿ 7 ಎಕರೆ 18 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸಿದ್ದಪ್ಪ ತಂದೆ ಹೈಬತಿರವರ ಹೆಸರಿನಲ್ಲಿ ಯಾವತ್ತು 7 ಎಕರೆ 18 ಗುಂಟೆ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪ ತಂದೆ ಹೈಬತಿರವರ ಹೆಸರಿನಲ್ಲಿ 7 ಎಕರೆ 18 ಗುಂಟೆ ಜಮೀನು ಇತ್ತು ಎಂದು ತೋರಿಸಲು ನಾವು ನ್ಯಾಯಾಲಯಕ್ಕೆ ಪಹಣಿ ಸಲ್ಲಿಸಿಲ್ಲ. 7 ಎಕರೆ 18 ಗುಂಟೆ ಜಮೀನಿನಲ್ಲಿ 3 ಎಕರೆ 28 ಗುಂಟೆ ಜಮೀನನ್ನು ಶಿವಪ್ಪ ಹೈಬತಿಯವರು ಭೀಮು ತಂದೆ ಫೆಮುರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1972-73ನೇ ಸಾಲಿನಲ್ಲಿ 3 ಎಕರೆ 28 ಗುಂಟೆ ಜಮೀನು ಭೀಮು ತಂದೆ ಫೆಮುರವರ ಹೆಸರಿಗೆ ಮ್ಯುಟೇಷ ಆಯಿತು ಎಂದರೆ ಸರಿಯಲ್ಲ. 3 ಎಕರೆ 28 ಗುಂಟೆ ಸಿದ್ದಪ್ಪನ ಹೆಸರಿಗೆ ಇದ್ದ ಜಮೀನನ್ನು ಸಿದ್ದಪ್ಪರವರು ರಾಮಣ್ಣ ತಂದೆ ಯಲ್ಲಪ್ಪರವರಿಗೆ ಮಾರಟಾ ಮಾಡಿದರು ಎಂದರೆ ಸರಿಯಲ್ಲ. 3 ಎಕರೆ 29 ಗುಂಟೆ ಜಮೀನಿನ ಮಾಲಿಕ ಭೀಮು ತಂದೆ ಫೆಮುರವರು ಆಗಿದ್ದು ಮತ್ತು 3 ಎಕರೆ 28 ಗುಂಟೆ ಜಮೀನಿನ ಮಾಲಿಕ ರಾಮಣ್ಣ ತಂದೆ ಯಲ್ಲಪ್ಪ ಆಗಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಪಹಣಿಗಳನ್ನು ನೋಡಿಲ್ಲ. ನನ್ನ ಅಜ್ಜನ ಹೆಸರು ರಾಮಣ್ಣ ತಂದೆ ನಾಗಪ್ಪ ಇರುತ್ತದೆ. ರಾಮಣ್ಣ ತಂದೆ ನಾಗಪ್ಪರವರು ಯಾರಿಂದ ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ಸಿದ್ದಪ್ಪ ತಂದೆ ಹೈಬತಿರವರಿಂದ ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. ಇದರ ಬಗ್ಗೆ ಖರೀದಿ ಪತ್ರ ಮಾಡಿಕೊಂಡಿಲ್ಲ. ಸಿದ್ದಪ್ಪ ತಂದೆ ಹೈಬತಿ ಬೇರೆ ಮತ್ತು ಸಿದ್ದಪ್ಪ ತಂದೆ ಹಾಶಪ್ಪ ಬೇರೆ ಎಂದರೆ ಸರಿ. ಸಿದ್ದಪ್ಪ ತಂದೆ ಹೈಬತಿ ಮತ್ತು ಸಿದ್ದಪ್ಪ ತಂದೆ ಹಾಶಪ್ಪ ರವರ ನಡುವೆ ಯಾವ ರೀತಿಯ ಸಂಬಂಧ ಇಲ್ಲ ಎಂದರೆ ಸರಿ. ಸಿದ್ದಪ್ಪ ತಂದೆ ಹಾಶಪ್ಪರವರು ಯಾರು ಎಂದರೆ ಸಾಕ್ಷಿ ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ರಾಮಣ್ಣ

ತಂದೆ ಹಾಶಪ್ಪ ಯಾರು ಎಂದರೆ ಸಾಕ್ಷಿ ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮಾಲಿಕ ಸಿದ್ದಪ್ಪ ತಂದೆ ಹೈಬತಿ ಆಗಿದ್ದು ನಂತರ ರಾಮಣ್ಣ ತಂದೆ ಯಲಪ್ಪ ಮಾಲಿಕ ಆಗಿರುತ್ತಾರೆ ಎಂದರೆ ಸರಿಯಲ್ಲ. ರಾಮಣ್ಣ ತಂದೆ ಯಲಪ್ಪ ಮತ್ತು ರಾಮಣ್ಣ ತಂದೆ ನಾಗಪ್ಪರವರ ನಡುವೆ ಯಾವುದೇ ಸಂಬಂಧ ಇಲ್ಲ. ಸಿದ್ದಪ್ಪ ತಂದೆ ಹಾಶಪ್ಪ ಎಂಬುವವರು ನಮ್ಮ ಊರಿನಲ್ಲಿ ಇರುತ್ತಾರೆ. ಸಿದ್ದಪ್ಪ ತಂದೆ ಹಾಶಪ್ಪರವರ ಹೆಸರಿಗೆ ಜಮೀನು ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ತಂದೆ ಹಾಶಪ್ಪರವರಿಗೆ ದಾವಾ ಆಸ್ತಿ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಅವರ ಹೆಸರಿಗೆ ಆಗಿದೆ ಎಂದು ಹೇಳುತ್ತಾರೆ. ರಾಮಣ್ಣ ತಂದೆ ನಾಗಪ್ಪರವರಿಗೆ ಜಮೀನು ಸಿದ್ದಪ್ಪ ತಂದೆ ಹೈಬತಿ ಮಾರಾಟ ಮಾಡಿರುತ್ತಾರೆ. ರಾಮಣ್ಣ ತಂದೆ ನಾಗಪ್ಪರವರಿಗೆ ಜಮೀನು ಸಿದ್ದಪ್ಪ ತಂದೆ ಹೈಬತಿ ಮಾರಾಟ ಖರೀದಿ ಪತ್ರಗಳನ್ನುನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿ.ಡಿ-6 ಯಾವ ಖರೀದಿ ಪತ್ರ ಇದೆ ಎಂದರೆ ಸಾಕ್ಷಿ ಅದು ನನಗೆ ಸಂಬಂಧ ಇಲ್ಲದ ದಾಖಲೆ ಇರುತ್ತದೆ ಎಂದು ಹೇಳುತ್ತಾರೆ. ಸಿದ್ದಪ್ಪ ತಂದೆ ಹಾಶಪ್ಪರವರಿಗೆ ಜಮೀನು ಮಾರಾಟ ಮಾಡುವ ಅಧಿಕಾರ ಇರಲಿಲ್ಲ ಆದ್ದರಿಂದ ನಿಡಿ-6 ರಲ್ಲಿ ಜಮೀನು ಮಾರಾಟ ಮಾಡುವ ಅಧಿಕಾರ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-6 ರಲ್ಲಿ ತೋರಿಸಲು ಆಸ್ತಿಗು ಮತ್ತು ಸಿದ್ದಪ್ಪ ತಂದೆ ಹಾಶಪ್ಪರವರಿಗೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪ ತಂದೆ ಹಾಶಪ್ಪರವರಿಗೆ ಖೊಟ್ಟಿ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದಪ್ಪ ತಂದೆ ಹಾಶಪ್ಪರವರ ಅಡ್ಡ ಹೆಸರು ಚಿಂತನೂರ ಇರುತ್ತದೆ. ಸಿದ್ದಪ್ಪ ತಂದೆ ಹಾಶಪ್ಪ ಚಿಂತನೂರ ಕುಟುಂಬಕ್ಕೆ ಸರ್ವೆ ನಂಬರ 44 7 ಎಕರೆ 18 ಗುಂಟೆ ಜಮೀನು ಇದೆಯಾ ಎಂದರೆ ಸಾಕ್ಷಿ ಇದೆ ಆದ್ದರಿಂದ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಹಾಶಪ್ಪರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸಿದ್ದಪ್ಪ ತಂದೆ ಹಾಶಪ್ಪ

ಚಿಂತನೂರ ಕುಟುಂಬಕ್ಕೆ ಸರ್ವೆ ನಂಬರ 44 7 ಎಕರೆ 18 ಗುಂಟೆ ಜಮೀನು ಇಲ್ಲ ಎಂದರೆ ಸಾಕ್ಷಿ ಇಲ್ಲದಿದ್ದರೆ ನಮಗೆ ಹೇಗೆ ಜಮೀನು ಮಾರಾಟ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಸಿದ್ದಪ್ಪ ತಂದೆ ಹೈಬತಿ ಇದ್ದ ದಾಖಲೆಯನ್ನು ಸಿದ್ದಪ್ಪರವರು ತನ್ನ ತಂದೆಯ ಹೆಸರು ಬರೆದುಕೊಂಡು ಜಮೀನು ಮಾರಾಟ ಮಾಡಿರುತ್ತಾರೆ ಎಂದರ ಸರಿಯಲ್ಲ. ದಾವಾ ಆಸ್ತಿಯ ಸಿದ್ದಪ್ಪ ತಂದೆ ಹಾಶಪ್ಪ ಚಿಂತನೂರ ಕುಟುಂಬಕ್ಕೆ ಹಿಂದಿನಿಂದಲು ಅವರ ಪೂರ್ವಜ್ಜರಿಂದಲು ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪ ತಂದೆ ಹೈಬತಿರವರು ದಾವಾ ಆಸ್ತಿಗೆ ಸಂಬಂಧ ಪಟ್ಟಿದವರು ಆಗಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಪ್ಪ ಹೈಬತಿಯವರಿಂದ ಸಿದ್ದಪ್ಪ ತಂದೆ ಹಾಶಪ್ಪರವರಿಗೆ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.